ಕಾರ್ಯಕ್ರಮಗಳನ್ನು ಯಾವಾಗ ಪೂರ್ಣ ಗೊಳಿಸಲಾಗಿದೆ.

ಶ್ರೀಮತಿ.ಲೀಲಾದೇವಿ ಆರ್.ಪ್ರಸಾದ್ (ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ರಾಜ್ಯ ಹಣಕಾಸು ನಿಗಮದಿಂದ ಮಾಗಡಿ ಕ್ಷೇತ್ರದ ಅಭಿವೃದ್ಧಿಗೆ ಕೈಗೊಂಡ ಕ್ರಮಗಳು.

2858:(3868)

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994 ಡಿಸೆಂಬರ್‌ನಿಂದ ಈವರೆಗೆ ಮಾಗಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕರ್ನಾಟಕ ರಾಜ್ಯ ಹಣಕಾಸು ನಿಗಮದ ವತಿಯಿಂದ ಎಷ್ಟು ಜನರಿಗೆ ಯಾವ ಉದ್ದೇಶಕ್ಕೆ ಎಷ್ಟು ಮೊತ್ತದ ಹಣವನ್ನು ಸಾಲವಾಗಿ ನೀಡಲಾಗಿದೆ?

ಆ) 1994 ಡಿಸೆಂಬರ್‌ನಿಂದ ಮಾಗಡಿ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೆ ಕರ್ನಾಟಕ ಹಣಕಾಸು ನಿಗಮವು ಕೈಗೊಂಡ ಕಾರ್ಯಕ್ರಮಗಳು ಯಾವುವು; ಆ ಬಗ್ಗೆ ವ್ಯಯಿಸಿದ ಹಣವೆಷ್ಟು? ಆ ಯೋಜನೆಗಳು ಯಾವುವು;

ಇ) ಹಾಲಿ ಚಾಲ್ತಿಯಲ್ಲಿರುವ ಹಾಗೂ ಬಾಕಿಯಿರುವ ಕಾರ್ಯಕ್ರಮಗಳು, ಯೋಜನೆಗಳು ಯಾವುವು; ಇವುಗಳಿಗೆ ಮಂಜೂರಾದ ಮೊತ್ತವೆಷ್ಟು; ಇವುಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು):

ಅ) ಡಿಸೆಂಬರ್ 1994ರಿಂದ ಈವರೆಗೆ ಮಾಗಡಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು 62 ಉದ್ಯಮಿಗಳಿಗೆ 309.61 ಲಕ್ಷ ರೂಗಳನ್ನು ಅನೇಕ ಉದ್ದೇಶಗಳಿಗಾಗಿ (ವಾಹನವನ್ನು ಖರೀದಿಸಲು, ಅಕ್ಕಿ ಗಿರಣಿ, ರೇಷ್ಮೆ ಟ್ವಿಸ್ಟಿಂಗ್ ಇತ್ಯಾದಿ) ಕೈಗಾರಿಕೆಗಳನ್ನು ಸ್ಥಾಪಿಸಲು ಸಾಲ ಮಂಜೂರು ಮಾಡಿದೆ.

ಆ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಡಿಸೆಂಬರ್ 1994ರಿಂದ ಬೆಂಗಳೂರು (ಗ್ರಾಮಾಂತರ) ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ನಿವಾಸಿಗಳ ಸಲುವಾಗಿ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದೆ. ಇವುಗಳ ಪ್ರಯೋಜನವು ಮಾಗಡಿ ವಿಧಾನಸಭಾ ಕ್ಷೇತ್ರದ ಜನರಿಗೂ ಲಭ್ಯವಾಗಿತ್ತು.

ಇ) ಸಂಸ್ಥೆಯ ಅಧಿಕಾರಿಗಳು ಈ ವರ್ಷವು ಭಾವಿ ಉದ್ದಿಮದಾರರೊಂದಿಗೆ ಪತ್ರ ವ್ಯವಹಾರ ಮತ್ತು ಮುಖಿತಃ ಚರ್ಚೆ ಮಾಡಿ ಸಂಸ್ಥೆಯ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ಒದಗಿಸಿ ಉದ್ಧಿಮೆ ದಾರರನ್ನು ಪ್ರೋತ್ಸಾಹಿಸಿ ಸಾಲ ಸೌಲಭ್ಯಗಳನ್ನು ಒದಗಿಸುತ್ತಾ ಬಂದಿದೆ. ಈ ರೀತಿಯ ಕಾರ್ಯಕ್ರಮಗಳಲ್ಲಿ ಸಂಸ್ಥೆಯ ಹಿರಿಯ ಅಧಿಕಾರಿಗಳು ಹಾಗೂ ಪರಿಣಿತರು ಭಗವಹಿಸಿ ಕೈಗಾರಿಕೆಗಳ ಬಗ್ಗೆ ಸೂಕ್ತ ಮಾಹಿತಿ ನೀಡಿ ರಾಜ್ಯದ ಎಲ್ಲಾ ಪ್ರದೇಶದ ಕೈಗಾರಿಕಾ ಬೆಳವಣಿಗೆಯಲ್ಲಿ ಸಹಾಯಕರಾಗಿದ್ದಾರೆ.

ಕೊಡವ ಭಾಷೆ ಚಲನಚಿತ್ರ ''ಬಾಲ್‌ಪೊಲಂದತ್'' ಕ್ಕೆ ಸಹಾಯ ಧನ

2859:(3849)

ಶ್ರೀ ಹೆಚ್.ಡಿ.ಬಸವರಾಜು (ವಿರಾಜಪೇಟೆ): ಮಾನ್ಯ ಕಾನೂನು ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡವ ಭಾಷಾ ಚಲನಚಿತ್ರ 'ಬಾಳ ಪೊಲಂದತ'ಕ್ಕೆ ಸಹಾಯಧನ ಒದಗಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಆ) ಸಹಾಯಧನ ಮಂಜೂರಾಗಿದ್ದಲ್ಲಿ ಎಷ್ಟು ಹಣ ಮಂಜೂರಾಗಿದೆ? ಸಹಾಯಧನ ನೀಡಲು ಸರ್ಕಾರದವರು ಅನುಸರಿಸುವ ಕ್ರಮಗಳೇನು?

ಶ್ರೀ ಎಂ.ಸಿ.ನಾಣಯ್ಯ (ಕಾನೂನು, ವಾರ್ತಾ ಮತ್ತು ಪ್ರಚಾರ ಸಚಿವರು):

ಅ) ಬಾಲ್ ಪೊಲಂದತ ಚಿತ್ರವು ದಿನಾಂಕ: 31-3-98ರಂದು ಸೆನ್ಸಾರ್‌ಗೊಂಡಿದೆ. ದಿನಾಂಕ: 1-4-96ರ ನಂತರ ಸೆನ್ಸಾರ್‌ಗೊಳ್ಳುವ ಚಿತ್ರಗಳಿಗೆ ಸಹಾಯಧನ ಮಂಜೂರು ಮಾಡಲು ಗುಣಾತ್ಮಕ ಆಯ್ಕೆ ಸಲಹಾ ಸಮಿತಿಯನ್ನು ರಚಿಸಲಾಗುತ್ತಿದ್ದು, ಸದರಿ ಸಮಿತಿ ಚಿತ್ರವನ್ನು ವೀಕ್ಷಿಸಿ ಶಿಫಾರಸ್ಸು ಮಾಡಿದ ನಂತರ ಪರಿಶೀಲಿಸಲಾಗುವದು.

ಆ) ಉದ್ಭವಿಸುವುದಿಲ್ಲ.

ದಿನಾಂಕ: 1-4-96ರಿಂದ ಸೆನ್ಸಾರ್‌ಗೊಂಡ ಕನ್ನಡ, ಕೊಡವ, ಕೊಂಕಣಿ, ತುಳು ಮತ್ತು ಲಂಬಾಣಿ ಭಾಷಾ ಚಲನಚಿತ್ರಗಳಿಗೆ ಅವುಗಳ ಗುಣಮಟ್ಟದ ಆಧಾರದ ಮೇಲೆ